ಅಥವಾ ಹುಟ್ಟಿದ ಕರುವನ್ನೇ ಯಾವುದಾರೂ ತುಳಿದು ಹಾಕಿದರೆ? ಒಮ್ಮೆ ಕರು ಹಾಕಿತೋ ನಂತರದ ಸಡಗರ ನೋಡಬೇಕು ಅದಕ್ಕೆ ನಂಜಾಗದಿರಲೆಂದು ಕಾಳುಮೆಣಸಿನಪುಡಿಗೆ ಬೆಲ್ಲ ಸೇರಿಸಿ ಬಾಳೆಲೆಯಲ್ಲಿ ಸುತ್ತಿ ತಿನ್ನಿಸುವುದು. ಗಿಣ್ಣಾಲನ್ನು ಕರೆದು ಮೂರು ದಿನಗಳ ಕಾಲ ಆ ಬಾಣಂತಿಗೇ ಕುಡಿಸುವುದು. (ಎಳೇ ಬಾಣಂತಿ ಹಾಲು ವ್ಯಾಂ! ಅಂತ ಗಿಣ್ಣು ಹಾಲಿಗೆ ಮುಖ ಸಿಂಡರಿಸುವ ಮಂದಿ ಈಗಲೂ ನಮ್ಮ ಹಳ್ಳಿಯಲ್ಲಿ ಕಾಣ ಸಿಗುತ್ತಾರೆ!) ಆಗತಾನೇ ಹಾಕಿದ ಕರುವನ್ನು ತಾಯಮ್ಮ ನೆಕ್ಕಿ ನೆಕ್ಕಿ ಕ್ಲೀನ್ ಮಾಡಿದಾಗ ಎದ್ದು ನಿಲ್ಲಲು ಹವಣಿಸುವ ಆ ಕಂದಮ್ಮನಿಗೆ ಚಂದದೊಂದು ಹೆಸರಿಡಲು ನಡೆಸುವ ಕಸರತ್ತು ಒಂದೇ ಎರಡೇ! ಮೊದಲೆಲ್ಲ ಅವುಗಳ ಲಿಂಗ ಬಣ್ಣ ಡಿಸೈನಿಗನುಗುಣವಾಗಿ ಕಾಳ ಕಾಳಿ ಬೆಳ್ಳ ಬೆಳ್ಳಿ ಕೆಂಚ ಕೆಂಚಿ ಹಂಡ ಹುಂಡಿ ಅಂತ ನಾಮಕರಣವಾಗುತ್ತಿದ್ದರೆ ಆಮೇಲಾ ಮೇಲೆ ಸುಗುಣ, ಸುಮತಿ, ಮಲ್ಲಿಕಾ, ಬಸವ, ರಾಜಾ ಇತ್ಯಾದಿ ನವೀಕರಣಗೊಂಡ ಹೆಸರುಗಳು. ಪಾಪ, ಆ ಜಿಂಕೆ ಬಣ್ಣದ ಸುಮತಿಯಂತೂ ಅಮ್ಮ ಹಾಲುಬಾಯಿ ಮಾಡಿದ ಮರುದಿವಸ ತಳ ಹಿಡಿದ ಬೋಗುಣಿಗೆ ನೀರು ಸುರಿದು ಅದರ ಮುಂದಿಟ್ಟರೆ ಕರುವಿಗೆ ಹಾಲು ಇಟ್ಟುಕೊಳ್ಳುವುದನ್ನೂ ಮರೆತು ಪಾತ್ರೆಯನ್ನು ನೆಕ್ಕಿ ನೆಕ್ಕಿ ಪೂರ್ತಿ ಸೊರಬಿಡುತ್ತಿದ್ದಳು! (ಜಾನುವಾರುಗಳಿಗೆ ಬಂದ ಸಾಂಕ್ರಮಿಕ ಕಾಯಿಲೆಯೊಂದಕ್ಕೆ ತುತ್ತಾದ ಸುಮತಿ ನಮ್ಮನ್ನೆಲ್ಲ ಬಿಟ್ಟು ಹೋದಾಗ ಅಮ್ಮ ಈ ವಿಷಯ ಹೇಳಿಕೊಂಡು ಎಣ್ಣೆ ಎಣ್ಣೆ ಅಳುತ್ತಿದ್ದಳು...)

ಅಕಸ್ಮಾತ್ತಾಗಿ ಇಂಥ ಮೂಕ ಜೀವಿಗಳೇನಾದರೂ ಗದ್ದೆ ಮೂಲೆಯ ನೀರಿರದ ಗುಮ್ಮೆಯಲ್ಲೋ ಸಣ್ಣ ಪುಟ್ಟ ಕಣಿವೆಯಲ್ಲೋ ಬಿದ್ದು ಮೇಲೇರಲಾಗದೇ ಒದ್ದಾಡುತ್ತಿದ್ದರೆ ಆವಾಗಿನ ಸಂಭ್ರಮ(!)ವೇ ಇನ್ನೊಂದು ರೀತಿ. ಆಚೀಚೆ ಮನೆಯ ಆಳು ಕಾಳುಗಳಿಗೆಲ್ಲ ಹೇಳಿ ಕಳಿಸಿ, ಬಂದವರೆಲ್ಲ ಈ ಹಿಂದೆ ಎಲ್ಲೆಲ್ಲಿ ಇಂಥದೇ ಪ್ರಸಂಗ ನಡೆದಿತ್ತು, ಹೇಗೆ ಹೇಗೆ ಮೇಲೆತ್ತಲಾಗಿತ್ತು ಅಂತ ತಮ್ಮ ತಮ್ಮ ಅಭಿಪ್ರಾಯಗಳ ಹಿಕ್ಕೆ ಹಾಕಿ, ಕೊನೆಗೆ ಎಲ್ಲರೂ ಒಮ್ಮತದ ನಿರ್ಧಾರಕ್ಕೆ ಬಂದು, ಒನಕೆ ಹಗ್ಗಗಳ ಸಹಾಯದಿಂದ ಐಸಾ ಐಸಾ ಅನ್ನುತ್ತಾ ಮೇಲಕ್ಕೆತ್ತಿ ಚಾ, ಎಲೆ ಅಡಿಕೆ, ಹೊಗೆಸೊಪ್ಪಿನ ಸಮಾರಾಧನೆಯೊಂದಿಗೆ ಸಭೆ ಬರ್ಖಾಸ್ತಾದರೂ ಸುಮಾರು ದಿನಗಳ ಕಾಲ ಸುಮಾರು ಜನರ ಬಾಯಲ್ಲಿ ಆ ಘಟನೆ ನಾನಾ ಬಣ್ಣ ರೂಪಗಳೊಡನೆ ಈಗಿನ ಬ್ರೇಕಿಂಗ್ ನ್ಯೂಸ್‌ಗಳಿಗೆ ಕಡಿಮೆಯಿಲ್ಲದಂತೆ ಚರ್ವಿತ ಚರ್ವಣವಾಗುತ್ತಿತ್ತು.

ಇನ್ನು ಕೌಮಾರ್ಯಕ್ಕೆ ಬಂದರೆ ಅತಿಯಾದ ಶುಚಿತ್ವದಿಂದಾಗಿ ಹಟ್ಟಿ ಕೆಲಸ ಅಂದರೆ ಸ್ವಲ್ಪ ಮೂಗು ಮುರಿಯುವಂತಾಗಿತ್ತು ನನಗೆ! ಅಕ್ಕ ಮದುವೆಯಾಗಿ ಹೋದಮೇಲೆ ಅಮ್ಮನ ಗೈರು ಹಾಜರಿಯಲ್ಲಿ ಕಿಚನ್ ಮತ್ತು ಹಟ್ಟಿಯ ಕೆಲಸ ನನ್ನ ಸುಪರ್ದಿಗೆ ಬಂದಾಗ ಬೆಳಿಗ್ಗೆ ಹಾಲು ಕರೆಯಲು ಹೋದರೆ... ಆ ಸೊಪ್ಪಿನ ಹಟ್ಟಿಯ ಗೋಮಯ, ಗೋಮೂತ್ರದ ಸಮುದ್ರದಲ್ಲಿ ಕಾಲಿಟ್ಟಾಗ ಪಿತ ಪಿತ ಸಗಣಿ ಕಾಲ್ಬೆರಳ ಸಂದಿನಿಂದ ಮೇಲಕ್ಕೆ ಉಕ್ಕಿ, ಹಾಲು ಕರೆಯಲು ಕೂತರೆ ಬಟ್ಟೆಯ ಹಿಂಬದಿಗೆಲ್ಲ ಅಂಟಿ ಇವನ್ನೆಲ್ಲಾ ಅವಾಯ್ಡ್ ಮಾಡಲು ಚಪ್ಪಲಿ ಮೆಟ್ಟಿ, ತೊಟ್ಟ ಬಟ್ಟೆಯ ಮೇಲೊಂದು ತುಂಡು ಸೀರೆ ಸುತ್ತಿ ಜಾಗರೂಕಳಾಗಿ ಹಟ್ಟಿಗೆ ಇಳಿದರೆ ಆಹಾ ಆ ದನಕ್ಕೋ ಎಮ್ಮೆಗೋ ಇದು ಮಾಮೂಲು ಕೈಯಲ್ಲ ಅಂತ ಗೊತ್ತಾಗಿ ಮೈಲ್ಡಾಗಿ ತನ್ನ ಅಸಹನೆ ವ್ಯಕ್ತಪಡಿಸಲು ಸಗಣಿ ಮೆತ್ತಿದ ತನ್ನ ಬಾಲವನ್ನು ಆ ಕಡೆ ಈ ಕಡೆ ಬೀಸಣಿಗೆಯಾಡಿಸಿ ನನ್ನ ಕತ್ತು, ಕೆನ್ನೆ, ತಲೆಯ ಮೇಲೆಲ್ಲ ನವ್ಯಚಿತ್ರ ಬಿಡಿಸುತ್ತಿದ್ದರೆ ನನ್ನ ಕೋಪ ನೆತ್ತಿಗೇರಿ ಸಹಸ್ರ ಸಹಸ್ರ ನಾಮಾರ್ಚನೆಯ ಜೊತೆಗೆ ಒಂದೆರಡು ದೊಣ್ಣೆ ಏಟೂ ಬೀಳುತ್ತಿತ್ತು! (ಈ ಬಗ್ಗೆ ನನಗೆ ಈಗಲೂ